**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**CC No.35/2022**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಶಿವರಾಜ ಡೊಳ್ಳೆಶ್ವರ | ಪಿಡಬ್ಲ್ಯೂ | 06 |
| ತಂದೆ ಹೆಸರು | : | ನಾಗೇಂದ್ರಪ್ಪ | ಸಿ ಡಬ್ಲ್ಯೂ | 04 |
| ವಯಸ್ಸು | : | 36 ವರ್ಷ | | |
| ಉದ್ಯೋಗ | : | ಆಟೋ ಚಾಲಕ | | |
| ವಾಸ ಸ್ಥಳ | : | ಹಾನಗಲ್ | | |

**ದಿನಾಂಕ: 04.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಸಾಕ್ಷಿಗೆ ನಿಪಿ-13 ನ್ನು ತೋರಿಸಿದ್ದು ಸಾಕ್ಷಿಯು ಪಂಚನಾಮೆಯಲ್ಲಿಯ ಒಂದು ಸಹಿ ತನ್ನ ಸಹಿ ಅಂತಾ ಒಪ್ಪಿದ್ದು ಸದರಿ ಪಂಚನಾಮೆಯಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-13 ಬಿ ಎಂದು ಗುರುತಿಸಲಾಯಿತು. ನಿಪಿ-5 ರಲ್ಲಿಯ 5 ಪೊಟೋಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-13 ರಲ್ಲಿ ಏನು ಬರೆಯಲಾಗಿದೆ ಅಂತಾ ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕಾಗಿ ನಿಪಿ-13 ರಲ್ಲಿ ಸಹಿ ಪಡೆದಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ನಿಪಿ-14 ರ ಛಾಯಾಚಿತ್ರವನ್ನು ಹಾನಗಲ್ ಪೋಲಿಸ್ ಠಾಣೆಯಲ್ಲಿ ತೆಗೆದಿರತ್ತಾರೆ. ಆ ಪೊಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-14 ರಲ್ಲಿರುವ ಸಹಿಯನ್ನು 2-3 ವರ್ಷಗಳ ಹಿಂದೆ ಹಾನಗಲ್ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕಃ 18.07.2021 ರಂದು ಪ್ರಕರಣದ ಆರೋಪಿ ವಾಹನವನ್ನು ತೋರಿಸಿ ಹಾಜರುಪಡಿಸಿದ ಮೇರೆಗೆ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ನಿಪಿ-13 ರಂತೆ ಸಂಜೆ 5.30

ರಿಂದ 6.30 ರವರೆಗೆ ಹಾನಗಲ್ ಪೋಲಿಸ್ ಠಾಣಾ ಆವರಣದಲ್ಲಿ ಸದರಿ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ-14 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪೊಟೋದಲ್ಲಿರುವ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

ಪಂಚನಾಮೆ ಕಾಲಕ್ಕೆ ಬಜಾಜ ಕಂಪನಿಯ ಕೆಎ -25 ಎಎ 2310 ನೇದ್ದರ ಆಟೋವನ್ನು ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-13 ರಂತೆ ಪಂಚನಾಮೆ ಮಾಡಿ ಆ ಕಾಲಕ್ಕೆ ನಿಪಿ-14 ರಲ್ಲಿರುವ ಆಟೋ ರಿಕ್ಷಾವನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಎಸ್ ಜಿ  ವಕೀಲರಿಂದಃ</u>

(ಆರೋಪಿ ಪರ ವಕೀಲರು ಈ ಸಾಕ್ಷಿಧಾರರ ಪಾಟೀ ಸವಾಲು ಏನೂ ಇಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ )

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್.ಪಾಟೀಲ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್

ನಾನು ಆರೋಪಿಯನ್ನು ನೋಡಿದರೆ ಸಾಕ್ಷಿ ಗುರುತಿಸುತ್ತಾರೆ. ಈ ಹಂತದಲ್ಲಿ ಆರೋಪಿ ಗೈರು ಹಾಜರಾಗಿದ್ದು, ಆರೋಪಿಯ ಗೈರು ಹಾಜರಾತಿಯ ಬಗ್ಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.